## ಆ್ಯಸಿಡ್ ವ್ಯಾಪಾರಕ್ಕೆ ಸುಪ್ರೀಂ ಮಾರ್ಗಸೂಚಿ

- ಕನಿಷ್ಠ 18 ವರ್ಷವಾಗಿರಬೇಕು. ಅದಕ್ಕಿಂತ ಚಿಕ್ಕ ವಯಸ್ಸಿನವರಿಗೆ ಆ್ಯಸಿಡ್ ಮಾರಾಟ ಮಾಡುವಂತಿಲ್ಲ.
- ಗ್ರಾಹಕರ ಗುರುತಿನ ಚೀಟಿ ಮತ್ತು ವಿಳಾಸವನ್ನು ಪಡೆದುಕೊಳ್ಳಲೇಬೇಕು.
- ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ಎಂಬ ವಿವರವನ್ನು ಮಾರಾಟ ದಾಖಲಾತಿಯಲ್ಲಿ ನಮೂದಿಸಬೇಕು.
- ಆ್ಯಸಿಡ್ ಮಾರಾಟ ದಾಖಲೆಗಳನ್ನು ಪೊಲೀಸರಿಗೆ ಒದಗಿಸಬೇಕು
- ಮಾರಾಟ ಮಾಡಲೂ ಲೈಸನ್ಸ್ ಕಡ್ಡಾಯ.
- ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳು ತಮ್ಮಲ್ಲಿರುವ ವಿವಿಧ ಆ್ಯಸಿಡ್ ಸಂಗ್ರಹದ ಮೇಲ್ವಿಚಾರಣೆಗೆ ವ್ಯಕ್ತಿಯನ್ನು ನಿಯೋಜಿಸಬೇಕು. ಆಯಾ ಸಂಸ್ಥೆಯಲ್ಲಿನ ಆ್ಯಸಿಡ್‌ನ ಸಂಗ್ರಹ, ಬಳಕೆಗೆ ಆ ವ್ಯಕ್ತಿಯೇ ಹೊಣೆಗಾರ.

## ಆ್ಯಸಿಡ್ ದಾಳಿ ಮುಕ್ತ ಭಾರತದ ಕನಸು

ಇಷ್ಟು ವರ್ಷಗಳ ಒಳಗೆ ದೇಶವನ್ನು ಹಾಗೆ ಅಭಿವೃದ್ಧಿ ಮಾಡುತ್ತೇವೆ, ಹೀಗೆ ಅಭಿವೃದ್ಧಿ ಮಾಡುತ್ತೇವೆ ಎಂಬೆಲ್ಲ ಪ್ರತಿಜ್ಞೆಗಳು, ಬಗೆ ಬಗೆ ಹೆಸರಿನ 'ಮಿಷನ್'ಗಳನ್ನು ರಾಜಕಾರಣಿಗಳು ಪದೇಪದೇ ಮಾಡುತ್ತಲೇ ಇರುತ್ತಾರೆ. ಅವು ಯಾವವೂ ಈಡೇರುವುದಿಲ್ಲವಾದ್ದರಿಂದ ಪ್ರತಿಜ್ಞೆ ಪುನರಾವರ್ತನೆಗೂ ಅವರಿಗೆ ಅವಕಾಶಗಳು ಸಿಗುತ್ತಲೇ ಇರುತ್ತವೆ. ಆದರೆ ಈ ಪ್ರತಿಜ್ಞೆ ರಾಜಕಾರಣಿಗಳು ಇದುವರೆಗೆ ಮಾಡದೇ ಇದ್ದಿದ್ದು. ಅವರ ಕಣ್ಣಿಗೆ – ಮನಸ್ಸಿಗೆ ಮಹತ್ವ ಅನಿಸದೇ ಇದ್ದಿದ್ದೂ ಹೌದು. 2025ರ ಹೊತ್ತಿಗೆ 'ಬರ್ನ್ ಫ್ರೀ ಇಂಡಿಯಾ' ರೂಪಿಸಬೇಕು ಎಂಬ ಕನಸುನ್ನು ಹೊತ್ತು ಕೆಲಸ ಮಾಡುತ್ತಿದೆ 'ಬೀಯಿಂಗ್ ಪೇಷಂಟ್ ಪ್ರತಿಷ್ಠಾನ'. ಆ್ಯಸಿಡ್ ದಾಳಿಗೆ ತುತ್ತಾದವರ ಬೆಂಬಲಕ್ಕೆಂದೇ ಶುರುವಾದ ಈ ಪ್ರತಿಷ್ಠಾನದ ಸ್ಥಾಪಕರು ಮಿಲಿಂದ್ ಶಾ (ಚಿತ್ರದಲ್ಲಿರುವವರು). ಅವರ ಈ ಕನಸಿಗೆ ಪತ್ನಿ ವಿರಾಲ್ ಶಾ ಕೂಡ ಹೆಗಲು ಕೊಟ್ಟಿದ್ದಾರೆ (ಎಡಕ್ಕಿರುವವರು). ಅಹಮದಾಬಾದ್‌ನಲ್ಲಿರುವ ಈ ಸಂಸ್ಥೆ, ಆ್ಯಸಿಡ್ ದಾಳಿಗೆ ತುತ್ತಾದವರಿಗೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸುವುದರ ಜೊತೆಗೆ, ಅವರು ಬದುಕು ಕಟ್ಟಿಕೊಳ್ಳಲು ಬೇರೆ ಬೇರೆ ರೀತಿ ಬೆಂಬಲ ನೀಡುವ ಕೆಲಸವನ್ನು ಮಾಡುತ್ತಿದೆ. ಆ್ಯಸಿಡ್ ದಾಳಿ ಸಂತ್ರಸ್ತರಿಗೆ ಉದ್ಯೋಗ ಅವಕಾಶ ಕೊಡಿಸುವುದು, ಅವರ ಕುಟುಂಬ ಅವರನ್ನು ಕಡೆಗಣಿಸದ ಹಾಗೆ ಮನವೊಲಿಸುವುದು, ಮದುವೆಯಾಗಿದ್ದರೆ ಸಂಗಾತಿ, ವಿಚ್ಛೇದನ ನೀಡದ ಹಾಗೆ ಮನವೊಲಿಸುವ ಕೆಲಸವನ್ನೂ ಮಾಡುತ್ತದೆ. ಜೊತೆಗೆ ಆ್ಯಸಿಡ್ ದಾಳಿಗೆ ಒಳಗಾದವರಿಗೆ ಚಿಕಿತ್ಸೆ ನೀಡುವುದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ, ಹನ್ನೆರಡು ವೈದ್ಯರು ಮತ್ತವರು ಚಿಕಿತ್ಸೆ ನೀಡಿದ ಆ್ಯಸಿಡ್ ಸಂತ್ರಸ್ತರ ಫೋಟೊಗಳನ್ನು ಬಳಸಿಕೊಂಡು ದಿನದರ್ಶಿಯನ್ನೂ ರೂಪಿಸುತ್ತದೆ. ಹಾಗೆಯೇ ಆ್ಯಸಿಡ್ ಸಂತ್ರಸ್ತರಿಗಾಗಿಯೇ ಫ್ಯಾಷನ್ ಶೋ ಏರ್ಪಡಿಸಲಾಗುತ್ತದೆ. ಅವರಿಗಾಗಿ ವಧು/ವರರ ಅನ್ವೇಷಣೆ ಕೇಂದ್ರಗಳನ್ನೂ ಪ್ರಾರಂಭಿಸಿದೆ. ಸಂಪರ್ಕಕ್ಕಾಗಿ: ಮಿಂಚಂಚೆ beingpatientfoundation@gmail.com ಜಾಲತಾಣ: www.BeingPatientFoundation.org



ಹಿಂಸೆ ಅನುಭವಿಸಬೇಕಾಯಿತು' ಎನ್ನುತ್ತಾರೆ ಸೋನಿ ದೇವಿ.

ಆ್ಯಸಿಡ್ ದಾಳಿಗಳು ನಡೆಯುವುದಕ್ಕೆ ಕಾರಣಗಳೇನು? ಅಭಿವೃದ್ಧಿಶೀಲ ದೇಶಗಳಲ್ಲಿ ವರದಕ್ಷಿಣೆಯ ಕಾರಣಕ್ಕಾಗಿ ಹೆಚ್ಚಿನ ದೌರ್ಜನ್ಯಗಳು ನಡೆಯುತ್ತಿವೆ ಎನ್ನುತ್ತಾರೆ ಸಮಾಜಶಾಸ್ತ್ರಜ್ಞರು. ಪ್ರತೀಕಾರದ ರೂಪದಲ್ಲೂ ಆ್ಯಸಿಡ್ ಎರಚಲಾಗುತ್ತದೆ. ಹೆಣ್ಣುಮಕ್ಕಳ ಮುಖವನ್ನು ವಿರೂಪಗೊಳಿಸುವ ಮೂಲಕ ಖುಷಿಪಡುವ ವಿಕೃತ ಮನಸ್ಸುಗಳಿವೆ. ವ್ಯಾಪಾರ, ಜೂಜು, ಒಣಪ್ರತಿಷ್ಠೆ ಕೂಡ ಅಪರಾಧ ಪ್ರಕರಣಗಳಿಗೆ ಕಾರಣವಾಗಿರುವುದಿದೆ. ಆ್ಯಸಿಡ್ ದಾಳಿಗೆ ತುತ್ತಾಗುವ ಹೆಣ್ಣುಮಕ್ಕಳು ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಪುರುಷಪ್ರಧಾನ ವ್ಯವಸ್ಥೆಯಲ್ಲಂತೂ ಹೆಣ್ಣು ದಂಡನೆಗೊಳಗಾಗಲಿಕ್ಕಾಗಿಯೇ ಹುಟ್ಟಿದವಳು. ಹುಡುಗರು ಹುಡುಗಿಯರ ನಡುವೆ ಸಹಜ ಸಂವಹನಕ್ಕೆ ಅವಕಾಶವೇ ಇಲ್ಲದ ಸಮಾಜದಲ್ಲಿ, ಸಹಜವಾಗಿಯೇ ಲಿಂಗಭೇದ ಮನಸ್ಥಿತಿ ತಲೆಯೆತ್ತುತ್ತದೆ. ಈ ಮನೋಧರ್ಮವೇ ಆ್ಯಸಿಡ್ ದಾಳಿಗೆ ಕಾರಣಗಳಲ್ಲೊಂದು. ತನ್ನ ಅಪೇಕ್ಷೆಗಳಿಗೆ ತಕ್ಕಂತೆ ಹೆಣ್ಣು ಇಲ್ಲದೆ ಹೋದಾಗ ಗಂಡು ಕುಪಿತನಾಗುತ್ತಾನೆ. ಹೆಣ್ಣು ತನ್ನಿಂದ ದೂರವಾಗಲು ಬಯಸಿದರಂತೂ ಮತ್ತಷ್ಟು ಕ್ರುದ್ಧನಾಗುತ್ತಾನೆ. ತನಗೆ ಸಿಗದ ಹೆಣ್ಣು ಮತ್ತಾರಿಗೂ ಸಿಗಬಾರದೆಂಬ ಧೋರಣೆಯಿಂದ ಅವಳ ಮುಖಕ್ಕೆ ಆ್ಯಸಿಡ್ ಎರಚಿರುವ ಮನಸ್ಸುಗಳೂ ಇವೆ. ಮಹಿಳೆಯ ಮೇಲೆ ಅಧಿಕಾರ ಚಲಾಯಿಸುವ ಗಂಡಿನ ಹಟವೇ ದುರಂತಕ್ಕೆ ಎಡೆಮಾಡಿಕೊಡುತ್ತದೆ.

### ಎಲ್ಲೆಡೆ ಒಂದೇ ವ್ಯಥೆ

ಆ್ಯಸಿಡ್ ದಾಳಿ ಭಾರತಕ್ಕೆ ಸೀಮಿತವಾದ ವಿದ್ಯಮಾನವೇನೂ ಅಲ್ಲ. ನೆರೆಯ ಬಾಂಗ್ಲಾದಲ್ಲೂ ಆ್ಯಸಿಡ್ ನೀರಿನಂತೆ ಬಳಕೆಯಾಗುವುದಿದೆ. ಬಾಂಗ್ಲಾದ ಢಾಕಾ ನಗರವಂತೂ 'ವಿಶ್ವದ ಆ್ಯಸಿಡ್ ದಾಳಿಗಳ ರಾಜಧಾನಿ' ಎನ್ನುವ ಕುಖ್ಯಾತಿಗೆ ಪಾತ್ರವಾಗಿದೆ. ಕೌಟುಂಬಿಕ ದೌರ್ಜನ್ಯದ ಭಾಗವಾಗಿ ನಡೆಯುವ ಆ್ಯಸಿಡ್ ದಾಳಿಗಳು ಬಾಂಗ್ಲಾದಲ್ಲಿ ಹೆಚ್ಚು. ವಿಪರ್ಯಾಸವೆಂದರೆ, ಸುಟ್ಟಗಾಯಗಳಿಗೆ ಚಿಕಿತ್ಸೆ ನೀಡುವ ಸೌಲಭ್ಯಗಳು ಅಲ್ಲಿ ವಿರಳ. ಆ್ಯಸಿಡ್ ಮಾರಾಟಕ್ಕೆ ನಿಯಂತ್ರಣಗಳು ಹೇರಿದ ಮೇಲೆ ಬಾಂಗ್ಲಾದಲ್ಲಿ–ಢಾಕಾದಲ್ಲಿ ಪರಿಸ್ಥಿತಿ ಸಾಕಷ್ಟು ಸುಧಾರಿಸಿದೆ.

ಏಷ್ಯಾದ ದೇಶಗಳು, ಮಧ್ಯಪ್ರಾಚ್ಯ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ಫ್ರಾನ್ಸ್ – ಅಮಾನವೀಯ ಘಟನೆಗಳ ಸಾಕ್ಷಿಗೆ ಜಗತ್ತಿನ ಯಾವ ಮಣ್ಣೂ ಹೊರತಾಗಿಲ್ಲ. ಪ್ರತಿ ದಿನ ಒಂದಲ್ಲಾ ಒಂದು ಕಡೆ ಓರ್ವ ಹೆಣ್ಣಿನ ಮುಖವನ್ನು ಆ್ಯಸಿಡ್ ತೋಯಿಸುತ್ತಲೇ ಇದೆ. ಕೆಲವು ಪ್ರಸಂಗಗಳಲ್ಲಂತೂ ಮಕ್ಕಳ ಮೇಲೂ ರಾಸಾಯನಿಕಗಳನ್ನು ಸುರಿದಿರುವುದಿದೆ.

ವಿಶ್ವದ ಸಭ್ಯ ನಾಗರಿಕತೆಯ ಮಾದರಿಗಳಲ್ಲೊಂದಾದ ಲಂಡನ್ ಕೂಡ ಆ್ಯಸಿಡ್